ಆ) ಸಂಘಗಳ ನೋಂದಣಾಧಿಕಾರಿಗಳಿಂದ ದಿನಾಂಕ 22-3-95ರಂದು ವರದಿ ಪಡೆದಿದ್ದು, ಈ ಸಂಘಕ್ಕೆ ಒಬ್ಬ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ ನಿಯಮಾನುಸಾರ ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ಹಣ ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಎಂದು ಜಿಲ್ಲಾ ನೋಂದಣಾಧಿಕಾರಿಗಳು ವರದಿ ಮಾಡಿರುತ್ತಾರೆ.

ಈ) ಸಂಘಗಳ ನೋಂದಣಾಧಿಕಾರಿಗಳಿಂದ ದಿನಾಂಕ : 22-3-95ರಂದು ವರದಿ ಪಡೆದಿದ್ದು, ಆ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಮುನ್ನ ನಿಯಮಾನುಸಾರ ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಗೇರು ಕೃಷಿಗೆ ಪ್ರೋತ್ಸಾಹ ಹಾಗೂ ಸಬ್ಸಿಡಿ ಕುರಿತು

2454 - ಡಾ|| ಯು. ಚಿತ್ತರಂಜನ್ (ಭಟ್ಕಳ್) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕನ್ನಡ ಜಿಲ್ಲೆಯಲ್ಲಿ ಗೇರು ಅಭಿವೃದ್ಧಿಗಾಗಿ 1995-96ನೇ ಸಾಲಿಗೆ ಸರ್ಕಾರದವರು ಮೀಸಲಿರಿಸಿದ ಹಣ ಎಷ್ಟು?*

ಆ) *ಈ ಹಣದಲ್ಲಿ ಗೇರು ಸಸಿಗಳ ಬಗ್ಗೆ ಇರುವ ಸಬ್ಸಿಡಿ ಎಷ್ಟು? ಇತರೆ ಸಬ್ಸಿಡಿ ಎಷ್ಟು? ಹಾಗೂ ಗೊಬ್ಬರ ರೂಪದಲ್ಲಿ ನೀಡುವ ರಿಯಾಯಿತಿ ಎಷ್ಟು?*

ಇ) *ಉತ್ತರ ಕನ್ನಡದಲ್ಲಿ ಈಗ ಎಷ್ಟು ಮಂಜೂರಾಗಿದೆ? ಮತ್ತು ಎಷ್ಟು ಖರ್ಚಾಗಿದೆ. ವಿವರ ಒದಗಿಸುವುದು.*

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಉತ್ತರ ಈ ರೀತಿ ಇದೆ

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮಗ್ರ ಗೇರು ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ 1995-96ನೇ ಸಾಲಿಗೆ 70.69 ಲಕ್ಷ ರೂ. ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಒದಗಿಸಿದೆ.

ಆ) ಈ ಹಣದಲ್ಲಿ ಗೇರು ಸಸಿಗಳಿಗೆ ಇರುವ ಸಬ್ಸಿಡಿ ಹಣ14.28 ಲಕ್ಷ ರೂ.

ಇತರೇ ಸಬ್ಸಿಡಿ (ಸಸ್ಯ ಸಂರಕ್ಷಣೆಗೆ) 26.26 ಲಕ್ಷ ರೂ.

ಗೊಬ್ಬರ ರೂಪದಲ್ಲಿ ರಿಯಾಯಿತಿ 28.17 ಲಕ್ಷ ರೂ.

ಇ) ಉತ್ತರ ಕನ್ನಡ ಜಿಲ್ಲೆಗೆ 70.69 ಲಕ್ಷ ಮಂಜೂರಾಗಿದೆ. 55.19 ಲಕ್ಷ ಬಿಡುಗಡೆಯಾಗಿದೆ. ರೂ. 9,36,524.00 ಆಗಸ್ಟ್ ತಿಂಗಳ ಅಂತ್ಯದವರೆಗೆ ಖರ್ಚಾಗಿದೆ.

ರಾಜ್ಯದಲ್ಲಿರುವ ಬಾಲಕಾರ್ಮಿಕರ ಶೋಷಣೆಯನ್ನು ತಪ್ಪಿಸುವ ಬಗ್ಗೆ ಕೈಗೊಂಡ ಕ್ರಮಗಳು

1939 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಬಾಲ ಕಾರ್ಮಿಕರ ಗಣತಿಯನ್ನು ಮಾಡಲಾಗಿದೆಯೇ? ಹಾಗಿದ್ದಲ್ಲಿ ಇವರುಗಳ ಸಂಖ್ಯೆ ಎಷ್ಟು?*

ಆ) *ಇವರುಗಳ ಸ್ಥಿತಿ ಅತ್ಯಂತ ಚಿಂತಾಜನಕವಾಗಿದ್ದು ಇವರುಗಳ ಶೋಷಣೆಯಾಗುತ್ತಿರುವುದರಿಂದ ಇವರುಗಳ ಶೋಷಣೆಯನ್ನು ತಪ್ಪಿಸಲು ಸರ್ಕಾರ ಯೋಜನೆಯನ್ನೇನಾದರೂ ರೂಪಿಸಿದೆಯೇ?*

ಇ) ರೂಪಿಸಿದ್ದಲ್ಲಿ, ಆ ಯೋಜನೆಗಳ ವಿವರಗಳೇನು?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) 1961ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಒಟ್ಟು 116.17 ಲಕ್ಷ ಬಾಲ ಕಾರ್ಮಿಕರಿದ್ದಾರೆ. 1991ರ ಜನಗಣತಿಯ ಅಂಕಿಅಂಶಗಳು ಇನ್ನೂ ಪ್ರಕಟವಾಗಿಲ್ಲ. ರಾಜ್ಯದಲ್ಲಿ ಪ್ರತ್ಯೇಕವಾಗಿ ಬಾಲ ಕಾರ್ಮಿಕರ ಗಣತಿ ಆಗಿಲ್ಲ.

ಆ) ಹೌದು, ಕರ್ನಾಟಕ ಸರ್ಕಾರವು ಬಹುಮುಖ ರೂಪವಿರುವ ಬಾಲ ಕಾರ್ಮಿಕ ಸಮಸ್ಯೆಯನ್ನು ತೊಡೆದು ಹಾಕುವ ಸಲುವಾಗಿ, ಹಲವು ಇಲಾಖೆಗಳನ್ನೊಳಗೊಂಡಂತೆ, ಆರೋಗ್ಯ, ಕಾರ್ಮಿಕ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಇತರೆ ಮಕ್ಕಳಿಗಾಗಿ ಕ್ರಿಯಾ ಯೋಜನೆಯನ್ನು ರೂಪಿಸಿದೆ.

ಇ) ಮಕ್ಕಳಿಗಾಗಿ ಕ್ರಿಯಾ ಯೋಜನೆಯ ಅಡಿಯಲ್ಲಿ ಕಾರ್ಮಿಕ ಇಲಾಖೆಯು 2000 ಇಸವಿಯ ವೇಳೆಗೆ 2 ಗುರಿಗಳನ್ನು ಹೊಂದಿದೆ.

1) ಅಪಾಯಕಾರಿ ಉದ್ದಿಮೆಗಳಲ್ಲಿ ತೊಡಗಿರುವ 14 ವರ್ಷದೊಳಗಿನ ಬಾಲ ಕಾರ್ಮಿಕರನ್ನು ತೊಡೆದು ಹಾಕುವುದು, ಮತ್ತು

2) ಅಪಾಯಕಾರಿಯಲ್ಲದ : ಸಾಂಪ್ರದಾಯಕವಲ್ಲದ (ಇನ್‌ಫಾರ್ಮಲ್) ಚಟುವಟಿಕೆಗಳಲ್ಲಿ ತೊಡಗಿರುವ ಮತ್ತು ಗೃಹ ಆಧಾರಿತ ಕೈಗಾರಿಕೆಗಳಲ್ಲಿ ತಾತ್ಕಾಲಿಕ :: ಪಾರ್ಟ್ ಟೈಂ (ಅರೆ ಕಾಲಿಕ) ಚಟುವಟಿಕೆಗಳಲ್ಲಿ ತೊಡಗಿರುವ ಬಾಲ ಕಾರ್ಮಿಕರನ್ನು ನಿಯಂತ್ರಿಸುವುದು.

ರಾಜ್ಯದಾದ್ಯಂತ ಓಡಾಡುವ ಸೂಪರ್ ಡೀಲಕ್ಸ್ ಬಸ್ಸುಗಳ ಸಂಖ್ಯೆ

1942 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಾದ್ಯಂತ ಹಾಲಿ ಓಡಾಡುತ್ತಿರುವ ಸೂಪರ್ ಡೀಲಕ್ಸ್ ಬಸ್ಸುಗಳ ಸಂಖ್ಯೆ ಎಷ್ಟು?

ಆ) ಎಷ್ಟು ಕಿ.ಮೀ. ಓಡಿದ ಬಳಿಕ, ಈ ಬಸ್ಸುಗಳನ್ನು ಬದಲಾಯಿಸಲಾಗುತ್ತಿದೆ?

ಇ) ಈಗ ಸಂಚಾರ ಮಾಡುತ್ತಿರುವ ಬಹುತೇಕ ಸೂಪರ್ ಡೀಲಕ್ಸ್ ಬಸ್ಸುಗಳು ಹಳೆಯದಾಗಿದ್ದು, ಆಗಾಗ ದುರಸ್ತಿಯಾಗುತ್ತಿದ್ದು, ಇದರಿಂದಾಗಿ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದರಿಂದ ಕೂಡಲೇ ಹಳೆಯದಾಗಿರುವ ಸೂಪರ್ ಡೀಲಕ್ಸ್ ಬಸ್ಸುಗಳನ್ನು ಬದಲಾಯಿಸಿ ಹೊಸ ಸೂಪರ್ ಡೀಲಕ್ಸ್ ಬಸ್‌ಗಳನ್ನು ಓಡಿಸಲಾಗುವುದೇ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಒಟ್ಟಾರೆ 260 ಸುವಿಹಾರಿ ವಾಹನಗಳು ಕಾರ್ಯಾಚರಣೆ ಮಾಡುತ್ತಿವೆ.

ಆ) ಈ ವಾಹನಗಳನ್ನು ಸಾಮಾನ್ಯವಾಗಿ 3.5 ಲಕ್ಷ ಕಿ.ಮೀ. ಕ್ರಮಿಸಿದ ನಂತರ ಬದಲಿಸುವ ವ್ಯವಸ್ಥೆ ಇದೆ, ಹಾಗೂ ಈ ವಾಹನಗಳನ್ನು ಗ್ರಾಮಾಂತರ ನಗರ, ಪುಷ್ಪಕ್ ವಾಹನಗಳನ್ನಾಗಿ ಪರಿವರ್ತಿಸುವ ಪದ್ಧತಿ ನಿಗಮದಲ್ಲಿದೆ.

ಇ) ಹಳೆಯ ಸುವಿಹಾರಿ ವಾಹನಗಳು ನಿಗದಿತ 3.5 ಲಕ್ಷ ಕಿ.ಮೀ. ಕ್ರಮಿಸಿದ ನಂತರ ಬದಲಾಯಿಸಲಾಗುವುದು. ಹಾಗಿದ್ದರೂ ಕೆಲವು ವಾಹನಗಳನ್ನು ಅವುಗಳ ಕವಚ ಸ್ಥಿತಿಗತಿ ಹಾಗೂ ಕುಂದುಕೊರತೆಗಳ ದೂರುಗಳಿಲ್ಲದ ಸಮಾಧಾನಕರವಾಗಿದ್ದರೆ ಮಾತ್ರ ಅಂತಹ ವಾಹನಗಳ ಕಾರ್ಯಾಚರಣೆಯನ್ನು ಮುಂದುವರೆಸಲಾಗುವುದು,